ಇ) ಕಾರ್ಮಿಕರಿಗೆ ಪರಿಹಾರ ನೀಡುವಲ್ಲಿ ವಿಳಂಬಕ್ಕೆ ಕಾರಣಗಳೇನು?

ಶ್ರೀ ಗೂಳಿಹಟ್ಟಿ ಡಿ. ಶೇಖರ್ (ಜವಳಿ ಯುವಜನಸೇವೆ ಹಾಗೂ ಕ್ರೀಡಾ ಸಚಿವರು) :

ಅ) ಕರ್ನಾಟಕ ಸ್ಟೇಟ್ ಟೆಕ್ಸ್‌ಟೈಲ್ ಮಿಲ್ ಲಿ., (ಮಹದೇವ ಜವಳಿ ಗಿರಣಿ) ಹುಬ್ಬಳ್ಳಿ ಕಂಪೆನಿಯು ಸೆಕ್ಷನ್ 449 (ಕಂಪೆನಿ ಕಾಯ್ದೆ 1959ರ ಪ್ರಕಾರ ಉಚ್ಚ ನ್ಯಾಯಾಲಯವು ದಿನಾಂಕ: 15–10–2004ರಲ್ಲಿ ಸಮಾಪನಾಧಿಕಾರಿಯಾಗಿ ಶ್ರೀ 'ರಮಾಕಾಂತ ಅಫೀಷಿಯಲ್ ಲಿಕ್ವಿಡೇಟರ್, ರವರನ್ನು ನೇಮಕ ಮಾಡಿರುತ್ತಾರೆ. ದಿ: 15–10–2004 ರಿಂದ ಕರ್ನಾಟಕ ಸ್ಟೇಟ್ ಟೆಕ್ಸ್‌ಟೈಲ್ ಮಿಲ್ ಲಿ.,ನ ಚರ ಮತ್ತು ಸ್ಥಿರ ಆಸ್ತಿಗಳ ಸಮಾಪನಾಧಿಕಾರಿಯವರ ಮೇಲ್ವಿಚಾರಣೆಯಲ್ಲಿರುತ್ತದೆ. ಕಂಪೆನಿ ಕಾಯ್ದೆ 449ರ ಪ್ರಕಾರ ಯಾವುದೇ ಕಾರ್ಮಿಕರಿಗೆ ಪರಿಹಾರವನ್ನು ಅಫೀಷಿಯಲ್ ಲಿಕ್ವಿಡೇಟರ್‌ರವರು ಇತ್ಯರ್ಥಪಡಿಸಬೇಕಿರುತ್ತದೆ. ಹಾಗೂ ಸದರಿ ಕಂಪೆನಿಯ ಸಮಾಪನಾಧಿಕಾರಿಯವರ ಮೇಲ್ವಿಚಾರಣೆಯಲ್ಲಿರುವುದರಿಂದ ಯಾವುದೇ ನಿರ್ಣಯವನ್ನು ಸಮಾಪನಾಧಿಕಾರಿಯವರೇ ಕೈಗೊಳ್ಳಬೇಕಿರುತ್ತದೆ.

ಆ) ಅನ್ವಯಿಸುವುದಿಲ್ಲ.

ಇ) ಕರ್ನಾಟಕ ಸ್ಟೇಟ್ ಟೆಕ್ಸ್‌ಟೈಲ್ ಮಿಲ್ ಲಿ., (ಮಹದೇವ ಜವಳಿ ಗಿರಣಿ) ರವರ ಸಮಾಜ ಕಾರ್ಮಿಕರಿಗೆ ದೊರೆಯಬೇಕಾಗಿರುವ ಸವಲತ್ತುಗಳ ಬಗ್ಗೆ ಅಫೀಷಿಯಲ್ ಲಿಕ್ವಿಡೇಟರ್‌ರವರೇ ತೀರ್ಮಾನಿಸಬೇಕಿರುತ್ತದೆ. ಸರ್ಕಾರದ ವತಿಯಿಂದ ಏನೂ ಕ್ರಮ ಜರುಗಿಸಲು ಬರುವುದಿಲ್ಲ. ಒಮ್ಮೆ ಕ್ರಮ ಜರುಗಿಸಿದಲ್ಲಿ ಸಬ್‌ಜುಡಿಸ್ (Subjudice) ಆಗುತ್ತದೆ.

790 ಹಾಸಿಗೆ (ಬೆಡ್)ಯಿಂದ 1200 ಬೆಡ್‌ಗೆ ಏರಿಸುವ ಕುರಿತು

951 (977) ಶ್ರೀ ವೀರಭದ್ರಪ್ಪ ಹಾಲಹರವಿ (ಹುಬ್ಬಳ್ಳಿ ಧಾರವಾಡ ಪೂರ್ವ) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ ಕಿಮ್ಸ್‌ನಲ್ಲಿ ಹಾಸಿಗೆ (ಬೆಡ್) 790 ರಿಂದ 1200ಕ್ಕೆ ಏರಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ;

ಆ) ಇದ್ದಲ್ಲಿ, ಯಾವ ರೀತಿಯ ಕ್ರಮ ಕೈಗೊಳ್ಳಲಾಗುವುದು;

ಇ) ಇಲ್ಲದಿದ್ದಲ್ಲಿ, ಕಾರಣಗಳೇನು?

ಶ್ರೀ ರಾಮಚಂದ್ರಗೌಡ (ವೈದ್ಯಕೀಯ ಶಿಕ್ಷಣ ಸಚಿವರು) :

ಅ) ಹೌದು.

ಆ) ಪರಿಶೀಲನೆಯಲ್ಲಿದೆ.

ಇ) ಉದ್ಭವಿಸುವುದಿಲ್ಲ.

ಹೆರಿಗೆ ಆಸ್ಪತ್ರೆ ಮಂಜೂರು ಮಾಡುವುದು

952 (1132) ಶ್ರೀ ವಿಶ್ವನಾಥ್ ಎಸ್.ಆರ್. (ಯಲಹಂಕ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಯಲಹಂಕ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಹೆಸರುಘಟ್ಟ ಹೋಬಳಿ ರಾಜಾನುಕುಂಟೆ ಗ್ರಾಮದಲ್ಲಿ ಹೆರಿಗೆ ಆಸ್ಪತ್ರೆ ಮಂಜೂರು ಮಾಡುವ ವಿಚಾರ ಸರ್ಕಾರದ ಗಮನದಲ್ಲಿದೆಯೇ;

ಆ) ಹಾಗಿದ್ದಲ್ಲಿ, ಇದನ್ನು ಎಂದು ಮಂಜೂರು ಮಾಡಲಾಗುವುದು;

ಇ) ಯಲಹಂಕ ವಿಧಾನಸಭಾ ಕ್ಷೇತ್ರದಲ್ಲಿ ಎಲ್ಲೆಲ್ಲಿ ಹೆರಿಗೆ ಆಸ್ಪತ್ರೆಗಳನ್ನು ಮಂಜೂರು ಮಾಡುವ ಪ್ರಸ್ತಾವನೆಗಳು ಬಂದಿರುತ್ತವೆ;

ಈ) ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಪ್ರಸ್ತುತ ರಾಜ್ಯದಲ್ಲಿ ಹೆರಿಗೆ ಆಸ್ಪತ್ರೆಗಳನ್ನು ಪ್ರತ್ಯೇಕವಾಗಿ ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಯಲಹಂಕ ವಿಧಾನಸಭಾ ಕ್ಷೇತ್ರದ ಕಡಬಗೆರೆಯಲ್ಲಿ ಹೆರಿಗೆ ಕೇಂದ್ರ ಸ್ಥಾಪಿಸಲು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗೆ ಮನವಿ ಬಂದಿರುತ್ತದೆ.